# ಮಂಗಳೂರಿಗೂ ಚಿಲ್ಲರೆ ವಹಿವಾಟು ವಿಸ್ತರಿಸಿದ ಫೆನೆಸ್ಟಾ

**ಮಂಗಳೂರು:** ಭಾರತದ ಅತಿದೊಡ್ಡ ಹಾಗೂ ಈ ವಲಯದಲ್ಲಿ ಮುಂಚೂಣಿಯಲ್ಲಿರುವ ಕಿಟಕಿ ಮತ್ತು ಬಾಗಿಲುಗಳ ಬ್ರಾಂಡ್ ಆಗಿರುವ ಫೆನೆಸ್ಟಾ ಮಂಗಳೂರಿನಲ್ಲಿ ತನ್ನನೂತನ ಎಕ್ಸ್‌ಕ್ಲೂಸಿವ್ ಶೋರೂಂ ಅನ್ನುನಂತೂರು ಹೂವಿನ ಮಾರುಕಟ್ಟೆ ಬಳಿಯ ಬಿಕರ್ನಕಟ್ಟೆಯ ಮರಿಯನ್ ಪ್ಯಾರಡೈಸ್ ಅವೆನ್ಯೂವಿನಲ್ಲಿ ಫೆನೆಸ್ಟಾ ಬ್ಯುಸಿನೆಸ್ ಹೆಡ್ ಸಾಕೇತ್ ಜೈನ್ ಉದ್ಘಾಟಿಸಿದರು.

ಅತ್ಯುನ್ನತ ದರ್ಜೆಯ ಯುಪಿವಿಸಿ ಕಿಟಕಿ ಹಾಗೂ ಬಾಗಿಲುಗಳ ಸಂಗ್ರಹ ಹೊಂದಿದ್ದು 700ಕ್ಕೂ ಹೆಚ್ಚು ವೈವಿಧ್ಯಮಯ ಶ್ರೇಣಿಯ ಆಕರ್ಷಕ ಉತ್ಪನ್ನಗಳನ್ನು ಈ ಶೋರೂಂ ಹೊಂದಿದೆ. ಕಲೆ ಮತ್ತು ವಿಜ್ಞಾನ ಸಮ್ಮಿಳಿತವಾದ ನಮ್ಮ ಉತ್ಪನ್ನಗಳನ್ನು ಗ್ರಾಹಕರ ಅಗತ್ಯತೆಯನ್ನು ಮತ್ತು ಪರಿಸರಾತ್ಮಕ ಅಂಶಗಳಾದ ಶಬ್ಧ, ಮಳೆ, ಧೂಳು ಮತ್ತು ಮಾಲಿನ್ಯವನ್ನು ಗಮನದಲ್ಲಿಟ್ಟುಕೊಂಡು ತಯಾರಿಸಲಾಗಿದೆ.ಮಂಗಳೂರಿನಫೆನೆಸ್ಟಾಶೋರೂಂ.ಕಿಟಕಿಗಳು. ಬಾಗಿಲುಗಳು ಮತ್ತು ವಿವಿಧ ವಿನ್ಯಾಸಗಳು ಮತ್ತು ಬಣ್ಣಗಳ ಸಾಧ್ಯತೆಯ ಉತ್ಪನ್ನ ಶ್ರೇಣಿಯನ್ನು ಪ್ರದರ್ಶಿಸುತ್ತಿದೆ. ಈ ಹೊಸ ಶೂರೂಂ ಉದ್ಘಾಟನೆಯೊಂದಿಗೆ 230 ಕಡೆಗಳಲ್ಲಿ ಫೆನೆಸ್ಟಾ ಅಸ್ತಿತ್ವ ಹೊಂದಿದಂತಾಗಿದೆ.

ಫೆನೆಸ್ಟಾದಲ್ಲಿ ಉತ್ಪನ್ನಗಳು ಕಟ್ಟುನಿಟ್ಟಿನ ಪರೀಕ್ಷೆಗೆ ಒಳಪಟ್ಟಿದ್ದು, ಪ್ರತಿ ಹಂತದಲ್ಲೂ ಗುಣಮಟ್ಟ ತಪಾಸಣೆಗೆ ಒತ್ತು ನೀಡಲಾಗುತ್ತದೆ. ಈ ಮೂಲಕ ಭಾರತದ ವೈವಿಧ್ಯಮಯ ಮತ್ತು ವೈಪರೀತ್ಯದ ಹವಾಗುಣದಲ್ಲೂ ಕ್ಷಮತೆಯನ್ನು ಖಾತ್ರಿಪಡಿಸಲಾಗುತ್ತದೆ. ಶಬ್ದ ತಡೆಯುವ. ಮಳೆ ತಡೆಯುವ. ದೂಳು ನಿರೋಧಕ ಗುಣಲಕ್ಷಣಗಳಿಂದಾಗಿ ದೇಶಾದ್ಯಂತ ಅಗ್ರಗಣ್ಯ ಬಿಲ್ಡರ್‌ಗಳಲ್ಲಿ, ವಾಸ್ತುಶಿಲ್ಪಿಗಳಲ್ಲಿ ಮತ್ತು ಆಂತರಿಕ ವಿನ್ಯಾಸಗಾರರಲ್ಲಿ ಫೆನೆಸ್ಟಾ ಉತ್ಪನ್ನಗಳು ಅತ್ಯಂತ ಜನಪ್ರಿಯವಾಗಿದೆ.